# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕಾರವಾರ

ಮೂ.ದಾ. ನಂ. 9/15

ಸಿ.ಡಬ್ಲ್ಯೂ 2

| | | |
|---|---|---|
| ಸಾಕ್ಷಿದಾರರ ಹೆಸರು | : | ಭುವನಸುಂದರಮ್ |
| ತಂದೆಯ ಹೆಸರು | : | ಬಾಲಗಂಗಾಧರ ದಾಸ್ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಎ.ಡಿ.ಎಲ್.ಆರ್. |
| ವಾಸ್ತವ್ಯ | : | ಕಾರವಾರ |

ಸತ್ಯ ಪ್ರತಿಜ್ಞೆಯ ಮೇರೆಗೆಃ ದಿಃ 25-05-2023

**ಮುಖ್ಯ ವಿಚಾರಣೆಃ ನ್ಯಾಯಾಲಯದಿಂದ**

ನ್ಯಾಯಾಲಯದ ಆದೇಶದ ಪ್ರಕಾರ ನಾನು ಕವಚಪತ್ರದ ಜೊತೆ ದಿನಾಂಕಃ 20-02-2023 ರಂದು ಕೋರ್ಟ ಕಮೀಶನರ್ ವರದಿಯನ್ನು, ಪಿಟಿ ಶೀಟ್, ನೋಟಿಸು ಮತ್ತು ದಾಖಲೆಗಳ ಜೊತೆ ಸಲ್ಲಿಸಿರುತ್ತೇನೆ.ಅವುಗಳನ್ನು ಒಟ್ಟಾಗಿ ನಿ.ಸಿ. 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರಃಶ್ರೀ ಎಸ್.ಕೆ.ಪಿ. ವಕೀಲರಿಂದಃ**

ಕಮೀಷನರ್ ನಕ್ಷೆಯಲ್ಲಿ ವಾದಿಯ ಜಾಗ ಯಾವುದು ಎಂಬ ಪ್ರಶ್ನೆಗೆ ಸಾಕ್ಷಿ ವಾದಿಯ ಜಾಗ ಯಾವುದು ಎಂದು ಹೇಳಲು ಆಗುತ್ತಿಲ್ಲ, ಕಾರಣ ಇಬ್ಬರೂ ಪಕ್ಷಗಾರರು ಆ ಜಾಗ ಅವರದ್ದೇ ಎಂದು ಹೇಳುತ್ತಿದ್ದಾರೆ ಎಂದು ಹೇಳುವರು. RTC ಪ್ರಕಾರ ವಾದಿಯ ಹೆಸರಿನಲ್ಲಿ 6 ಗುಂಟೆ ಜಮೀನು ಇದೆ. ಅದು ಭೂಪರಿವರ್ತನೆ ಆಗಿರುತ್ತದೆ. ನಮ್ಮ ಇಲಾಖೆಯಲ್ಲಿ ಹಿಸ್ಸಾ ಫಾರ್ಮ್-11 ಇದ್ದು ಅದರಲ್ಲಿ ಹೆಸರುಗಳನ್ನು ತೋರಿಸುವುದಿಲ್ಲ, ಹಿಸ್ಸಾಗಳನ್ನು ಮಾತ್ರ ತೋರಿಸುತ್ತೇವೆ. ಅದು ಮತ್ತು RTC ಗೆ ತಾಳೆ ಇರುತ್ತದೆ ಎಂದರೆ ಸರಿ. ಆದರೆ ಕೆಲವೊಮ್ಮೆ ಇರುವುದಿಲ್ಲ. RTC ಯನ್ನು ತಾಲೂಕು ಕಚೇರಿಯಲ್ಲಿ ಮಾಡುತ್ತಾರೆ, ನಾವು ಕೇವಲ ಸರ್ವೆ

ದಾಖಲೆಗಳನ್ನು ಇಡುತ್ತೇವೆ. RTC ಯನ್ನು ಮತ್ತು ನಮ್ಮಲ್ಲಿದ್ದ ಸರ್ವೆ ದಾಖಲೆಗಳನ್ನು ನೋಡಿ ಸರ್ವೆ ಮಾಡುತ್ತೇವೆ. ಪ್ರತಿವಾದಿಯ ಕ್ಷೇತ್ರ 1 ಎಕರೆ 9 ಗುಂಟೆ ಇರುತ್ತದೆ. ಈ ಮೊದಲೂ ಸಹ ನ್ಯಾಯಾಲಯಕ್ಕೆ ಒಂದು ಕಮೀಷನ್ ವರದಿ ಸಲ್ಲಿಸಿದ್ದರು. ಆ ವರದಿ ಯಾವ ಕಾರಣಕ್ಕೆ ತಿರಸ್ಕರಿಸಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಹಳೆಯ ವರದಿಯನ್ನು ನಾನು ನೋಡಿರುತ್ತೇನೆ. ಯಾವ ಕಾರಣಕ್ಕೆ ನ್ಯಾಯಾಲಯ ಅದನ್ನು ಸ್ವೀಕರಿಸಿಲ್ಲ ಎಂದು ನಾನು ನೋಡಿಲ್ಲ. ಅದರಲ್ಲಿ ವಾದಿಯ ಜಾಗ ಹಾಗೂ ಅತಿಕ್ರಮಣ ಆದ ಜಾಗ ತೋರಿಸದೇ ಇದ್ದ ಕಾರಣ ಅದು ತಿರಸ್ಕೃತವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನಗೆ ವಾದಿ – ಪ್ರತಿವಾದಿಯರು ಸಲ್ಲಿಸಿದ memo of instruction ಬಗ್ಗೆ ಮಾಹಿತಿ ಇದೆ. ಸಾಕ್ಷಿ ಮುಂದುವರಿದು ಅದರಂತೆ ವರದಿ ಸಲ್ಲಿಸಿದ್ದೇನೆ ಎಂದು ನುಡಿಯುವರು. ಸ್ಥಳದಲ್ಲಿ ವಾದಿ ಮತ್ತು ಪ್ರತಿವಾದಿ ಇಬ್ಬರೂ ಹಾಜರಿದ್ದರು. ಇಬ್ಬರೂ ತೋರಿಸಿದ ಪ್ರಕಾರ ಅಳತೆ ಮಾಡಿ ನಕ್ಷೆ ತಯಾರಿಸಿದ್ದೇನೆ. ವಾದಿಯವರು ಈಗಾಗಲೇ ಭೂಪರಿವರ್ತನೆ ಆಗಿರುವ ಜಾಗ ತಮ್ಮದು ಎಂದು ತೋರಿಸಿದ್ದರು. ನಿ.ಸಿ.8 ರಲ್ಲಿ ಭೂಪರಿವರ್ತನೆ ಆದೇಶವನ್ನು ಹಾಜರು ಮಾಡಿದ್ದು ಅದು ದಿನಾಂಕಃ 18–06–1998 ಆಗಿರುತ್ತದೆ. ಅದರಲ್ಲಿ ಒಂದು ನಕ್ಷೆ ಇದ್ದು ಎನ್‌ಎ ಕೋರಿರುವ ಪ್ರಕಾರ ಆಸ್ತಿ ಪೂರ್ವ–ಪಶ್ಚಿಮವಾಗಿದ್ದು, ಎನ್‌ಎ ಆದ ನಂತರ ಆಸ್ತಿ ಉತ್ತರ – ದಕ್ಷಿಣವಾಗಿ ಪೋಡಿಯಾಗಿದೆ. ಜಾಗ ವಾದಿಯವರದ್ದು ಆಗಿದ್ದು, ಸರ್ವೆ ಇಲಾಖೆಯವರು ಸುಳ್ಳು ದಾಖಲೆಗಳನ್ನು ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ದಿನಾಂಕಃ 26–06–2001 ರ ದಾಖಲೆಯು ಪ್ರತಿಪೋಡಿಯಾಗಿರುವ ದಾಖಲೆಯಾಗಿರುತ್ತದೆ. ಅದನ್ನು ನಿ.ಸಿ.8(ಎ) ಎಂದು ಗುರುತಿಸಲಾಯಿತು . ಅದು ಒಟ್ಟೂ 2 ಎಕರೆ 11 ಗುಂಟೆ ಜಾಗ ಆಗಿದ್ದು ಅದರಲ್ಲಿ 8 ಗುಂಟೆ ಖರಾಬು ಹೊರತುಪಡಿಸಿ 2 ಎಕರೆ 3





ಗುಂಟೆ ಉಳಿಯುತ್ತದೆ. ಅದರಲ್ಲಿ 6 ಗುಂಟೆ ವಾದಿಗೆ ಬಿನಶೇತ್ಕಿಯಾಗಿರುತ್ತದೆ. ಬಿನಶೇತ್ಕಿಯಾದ ನಂತರ ಕೆಲವೊಮ್ಮೆ ಆದೇಶದ ಆಧಾರದ ಮೇಲೆ ಹಾಗೂ ಕೆಲವೊಮ್ಮೆ ಅರ್ಜಿದಾರರ ಅರ್ಜಿಯ ಮೇಲೆ

ಪೋಡಿಯಾಗುತ್ತದೆ. ಈ ಕೇಸಿನಲ್ಲಿ ಯಾವ ರೀತಿ ಆಗಿದೆ ಎಂದು ಗೊತ್ತಿಲ್ಲ. ಜಿಲ್ಲಾಧಿಕಾರಿಗಳ ಆದೇಶದ ಪ್ರಕಾರ ನಕ್ಷೆ ಇರುವ ಪ್ರಕಾರ ಪೋಡಿ ಆಗಿರುವುದಿಲ್ಲ. ಆಕಾರಣ ಕಮೀಷನ್ ರಿಪೋರ್ಟನಲ್ಲಿ ತೋರಿಸಿದ ನಕ್ಷೆ ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ದಾಖಲೆ ಪ್ರಕಾರ ಮಾಡಿದ್ದೇನೆ ಎನ್ನುವರು. ನಿ.ಸಿ.8 ರಲ್ಲಿ ವರದಿ ಜೊತೆಯಲ್ಲಿ ಯಾವ ಆಧಾರದ ಮೇಲೆ ನಕ್ಷೆ ತಯಾರಿಸಿದ್ದೇನೆ ಎಂದು ದಾಖಲೆಗಳನ್ನು ಸಲ್ಲಿಸಿದ್ದೇನೆ. ರೆಕೊರ್ಡ ಪ್ರಕಾರ ಹಿಸ್ಸಾ ತೋರಿಸಲು ತೊಂದರೆ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ತೋರಿಸಿದ್ದೇನೆ ಎನ್ನುವರು. ಪ್ರತಿವಾದಿಗೆ ಸಂಬಂಧಪಟ್ಟಂತೆ ಎರಡು ಹಿಸ್ಸೆಗಳಿವೆ ಹಾಗೂ ವಾದಿಗೆ ದಾಖಲೆ ಪ್ರಕಾರ ಒಂದು ಹಿಸ್ಸೆ ಇದೆ. ಪ್ರತಿವಾದಿಗೆ ಹಕ್ಕಿನ ಪ್ರಕಾರ 1 ಎಕರೆ 10 ಗುಂಟೆ ಇದೆ. ನಕ್ಷೆ ಪ್ರಕಾರ 1 ಎಕರೆ 18 ಗುಂಟೆ ಇದ್ದು, ಅದರಲ್ಲಿ 8 ಗುಂಟೆ 11 ಆಣೆ ರಸ್ತೆಗೆ ಹೋಗಿದೆ. 1 ಎಕರೆ 9 ಗುಂಟೆ 14 ಆಣೆ ಪ್ರತಿವಾದಿ ತೋರಿಸಿದ ಪ್ರಕಾರ ಅವರ ಬಳಿ ಇದೆ. ಅದರಲ್ಲಿ 6 ಗುಂಟೆ ಕೂಡ ಸೇರಿ ಬರುತ್ತದೆ. ಹಸಿರು ಬಣ್ಣದಿಂದ ನಕ್ಷೆಯಲ್ಲಿ ತೋರಿಸಿದ ಜಾಗ 39 ಗುಂಟೆ 9 ಆಣೆ ಆಗಿರುತ್ತದೆ. ಹಿಸ್ಸಾ ನಂ. 2 ಎಂದು ಕಾಣಿಸಿದ ಜಾಗ 6 ಗುಂಟೆ 5 ಆಣೆ ಇರುತ್ತದೆ. ಪ್ಲಾಟ್ ನಂ. 3 ಎಂದು ಬರೆದ ಜಾಗ 4 ಗುಂಟೆ ಇದೆ. ಸದರಿ 3 ಭಾಗಗಳು ಒಟ್ಟುಗೂಡಿಸಿದರೆ 1 ಎಕರೆ 18 ಗುಂಟೆ 9 ಆಣೆ ಆಗುತ್ತದೆ. ಅದರಲ್ಲಿ 8 ಗುಂಟೆ 11 ಆಣೆ ರಸ್ತೆಯ ಜಾಗ ಸೇರಿರುತ್ತದೆ. ಆ ರಸ್ತೆ 2 ಕಡೆ ಇದೆ. ಸರ್ವೆ ನಂಬರನ ಮೇಲ್ಗಡೆ ಮತ್ತು ಕೆಳಗಡೆ ರಸ್ತೆ ಇದೆ. ವಾದಿಯರು ತೋರಿಸಿದ ಪ್ರಕಾರ ನಕ್ಷೆ ತಯಾರಿಸಿಲ್ಲ ಎಂದರೆ ಸರಿಯಲ್ಲ. ನಕ್ಷೆ ಪ್ರಕಾರ ವಾದಿ ತೋರಿಸಿದ ಜಾಗ ಅವರ ಜಾಗ ಆಗಿರುತ್ತದೆ ಎಂದರೆ ಸ.ನಂ. 231 ಅ6 ಆಗಿರುತ್ತದೆ. 8 ಗುಂಟೆ 11 ಆಣೆ ಮುನ್ಸಿಪಾಲ್ಟಿ ರಸ್ತೆಗೆ ಹೋಗಿರುವ ಜಾಗ ಪ್ರತಿವಾದಿಯ ಜಾಗದಲ್ಲಿ ಹೋಗುತ್ತದೆ ಎಂದರೆ ಸರಿ. ಪ್ರತಿವಾದಿಗೆ 1 ಎಕರೆ 11 ಗುಂಟೆಯಲ್ಲಿ ಮಾತ್ರ ಹಕ್ಕು ಇದ್ದು, ನಕ್ಷೆಯಲ್ಲಿ 7 ಗುಂಟೆ 9 ಆಣೆ ಜಾಸ್ತಿ ತೋರಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಕಾರವಾರ